S C.R.P.67

| |
|---|
| Form No.4<br>(Criminal)<br>Deposition<br>Sheets<br>(R.P.No.57) |

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 34/2025

**ಚಾ.ಸಾ.–01 ಫ್ರಾ.ಸಾ.–01**

| | |
|---|---|
| **ಸಾಕ್ಷಿದಾರರ ಹೆಸರು** | **ಗುರುಸ್ವಾಮಿ** |
| **ತಂದೆಯ ಹೆಸರು** | **ಬಿಳಿಯಯ್ಯ** |
| **ವಯಸ್ಸು** | **64 ವರ್ಷಗಳು** |
| **ಉದ್ಯೋಗ** | **ನಿವೃತ್ತ ಸರ್ಕಾರಿ ನೌಕರರು** |
| **ವಾಸ** | **ಹೊನ್ನಲಗೆರೆ ಗ್ರಾಮ,<br>ಮದ್ದೂರು ತಾಲ್ಲೂಕು** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದೇನೆ. ಚಸಾ 2 ರಿಂದ 6 ರವರ ಪರಿಚಯ ಇರುತ್ತದೆ. ಆರೋಪಿ ರವರ ಪರಿಚಯ ಇದೆ. ಅವರು ಒಕ್ಕಲಿಗ ಜಾತಿಯವರು. ನಾನು ಹಾಲಹಳ್ಳಿ ಬಡಾವಣೆಯಲ್ಲಿ ಒಂದು ನಿವೇಶನ ಖರೀದಿ ಮಾಡಿದ್ದೆ. ಅದರ ನಂ. 42 ಆಗಿದೆ. ಅದರ ಖಾತ ನಂ 911/911 ಆಗಿರುತ್ತದೆ. ಅದು 28 * 40 ವಿಸ್ತೀರ್ಣ ಇರುತ್ತದೆ. ಸತೀಶಕುಮಾರ ಎಂಬುವರ ಕಡೆಯಿಂದ ಖರೀದಿ ಮಾಡಿದ್ದೆ. ಸದರಿ ನಿವೇಶನಕ್ಕೆ ಸಂಬಂಧಿಸಿದಂತೆ ಒಂದು ಸಿವಿಲ್ ಪ್ರಕರಣ ಮಂಡ್ಯ ನ್ಯಾಯಾಲಯದಲ್ಲಿ ಆರೋಪಿ ಮತ್ತು ನಮ್ಮ ನಡುವೆ ಇರುತ್ತದೆ. ಅದನ್ನು ನಾನೆ ಹಾಕಿದ್ದೇನೆ. ನಾನು ಅದನ್ನು ಮಾರಾಟ ಮಾಡಬಾರದು ಎಂದು ಕೇಸು ಇರುವ ಬಗ್ಗೆ ನಾಮಫಲಕವನ್ನು ಹಾಕಲು ಹೋಗಿದ್ದೆ. ಆ ರೀತಿ 20.12.2024 ರಂದು ಹೋಗಿದ್ದೆ. ನಾನು ಅಲ್ಲಿಗೆ 3.30 ಕ್ಕೆ ಹೊಗಿದ್ದೆ. ಅಲ್ಲಿ ಸ್ವಚ್ಚಗೊಳಿಸಿ ಬೋರ್ಡು ನೆಡುತ್ತಿದ್ದೆ. ಆ ಸಮಯದಲ್ಲಿ ಚಾಸಾ 4 ರವರು

ಕೂಡ ನನ್ನ ಜೊತೆ ಬಂದಿದ್ದರು. ಬೋರ್ಡನ್ನು ನೆಟ್ಟು ಮೇಲೆ ಬಂದಾಗ ಆರೋಪಿ ಮತ್ತು 7-8 ಜನ ಬೋರ್ಡುಕಿತ್ತುಕೊಂಡು ನನಗೆ ಅಡ್ಡಬಂದಿದ್ದಾರೆ. ನಾನು ಅದನ್ನು ಕೇಳಿದಾಗ ಆರೋಪಿ ನೀನು ಹೊಲಯ ಇದ್ದೀಯ ನೀನೇನು ಮಾಡಲು ಸಾಧ್ಯ ಅದು ನಮ್ಮಪ್ಪನ ಆಸ್ತಿ ಯಾರಿಗಾದರು ಮಾರಾಟ ಮಾಡುತ್ತೇನೆ ಎಂದು ಹೇಳಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ 2 ರಿಂದ 4 ರವರು ಇದ್ದರು. ನಂತರ ನಾನು ದೂರು ಕೊಟ್ಟಿದ್ದೇನೆ. ಸದರಿ ದೂರು ಈಗ ನೋಡುತ್ತಿದ್ದೇನೆ ಅದನ್ನು ನಿಪಿ 1 ಎಂದು ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಪೊಲೀಸರು ಅನಂತರ ಸ್ಥ,ಳಕ್ಕೆ 23ನೆ ತಾರೀಖನಂದು ಬಂದಿರುತ್ತಾರೆ. ಪೊಲೀಸರಿಗೆ ನಾನೆ ಜಾಗ ತೋರಿಸಿಕೊಟ್ಟಿದ್ದೇನೆ. ಆ ಸಮಯದಲ್ಲಿ ಚಸಾ 5 ಮತ್ತು 6 ರವರು ಇದ್ದರು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರ ಸ್ಥಳದಲ್ಲಿ ತೆಗೆಯಲಾಗಿರುತ್ತದೆ. ಅದನ್ನುನಿಪಿ 2 ಎಂದು ಗುರುತಿಸಲಾಯಿತು. ಮಹಜರನ್ನು 12.20-1.20 ವರೆಗೆ ಬರೆಯಲಾಗಿದೆ. ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ 3ಎ ಎಂದು ಗುರುತಿಸಲಾಯಿತು. ಎಲ್ಲ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿದ್ದೇನೆ. ಪೊಲೀಸರಿಗೆ ನಾನು ಸೈಟಿನ ದಾಖಲೆಗಳನ್ನು ಕೊಟ್ಟಿದ್ದೇನೆ. ಸದರಿ ಪ್ರತಿಗಳನ್ನು ಈಗ ನಾನು ನೋಡುತ್ತಿದ್ದೇನೆ. ಗಲಾಟೆ ಮಾಡಿದ ವ್ಯಕ್ತಿ ನ್ಯಾಯಾಲಯದ ಮುಂದಿರುವ ಆರೋಪಿ ಆಗಿದ್ದಾರೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**
**ಸಮಯಾವಕಾಶ ಕೋರಿರುತ್ತಾರೆ. 300 ಖರ್ಚು ಕೊಡುವ ಆದೇಶದ ಮೇರೆಗೆ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ